ಕರ್ನಾಟಕ ವಿಧಾನ ಸಭೆ

ಸೋಮವಾರ 22ನೇ ಮಾರ್ಚ್ 1999ರಂದು ಸದನವು ವಿಧಾನಸೌಧದಲ್ಲಿರುವ
ವಿಧಾನಸಭೆಯ ಸಭಾಂಗಣದಲ್ಲಿ ಬೆಳಗ್ಗೆ 11.20 ಗಂಟೆಗೆ ಸಮಾವೇಶಗೊಂಡಿತು,
ಶ್ರೀ ರಮೇಶ್ ಕುಮಾರ್ ಅವರು ಪೀಠವನ್ನು ಅಲಂಕರಿಸಿದ್ದರು

1. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

(1) ವಿಷಯ : ಪ್ರಶ್ನೋತ್ತರ ವೇಳೆ ಬದಿಗೊತ್ತಿ ಪಂಚಾಯತಿ ಚುನಾವಣೆ ಬಗ್ಗೆ ಚರ್ಚಿಸುವುದು.

ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಅಧ್ಯಕ್ಷರೇ ಪಂಚಾಯತ್ ರಾಜ್ಯ ಚುನಾವಣೆ ಬಗ್ಗೆ...

ಶ್ರೀ ಕೆ.ಎಸ್.ಈಶ್ವರಪ್ಪ : ಸರ್ಕಾರಕ್ಕೆ ಹೈಕೋರ್ಟಿನಿಂದ ಛೀಮಾರಿ ಹಾಕಿದ್ದಾರೆ. ಸರ್ಕಾರ ಇದೆಯೋ ಇಲ್ಲವೋ ಎನ್ನುವ ಅನುಮಾನ ಬರುತ್ತಿದೆ.

ಅಧ್ಯಕ್ಷರು : ಕ್ವೊಶ್ಚನ್ ಅವರ್ ತೆಗೆದುಕೊಳ್ಳೋಣ ಮೊದಲಿಗೆ. ಸರ್ಕಾರ ಇದ್ದುದ್ದಕ್ಕೇ ಛೀಮಾರಿಹಾಕಿದ್ದು.

ಶ್ರೀ ಮಲ್ಲಿಕಾರ್ಜುನ ಖರ್ಗೆ : ತಾವು ಅನೇಕ ಸಲ ಹೇಳಿದಿರಿ. ಆದರೂ ಅವರು ಕೇಳಲಿಲ್ಲ. ಕೊನೆಗೆ ಹೈಕೋರ್ಟಿನವರೇ ಛೀಮಾರಿ ಹಾಕಿದಂತಾಯಿತು. ಇದರ ಜೊತೆಗೆ ಇನ್ನೊಂದು ಇಶ್ಯೂ ಪ್ರಸ್ತಾಪಿಸಬೇಕಾಗಿದೆ.

ಅಧ್ಯಕ್ಷರು : ಎರಡೂ ಪ್ರಮುಖವಾದ ವಿಚಾರಗಳು, ಎರಡನ್ನೂ ತೆಗೆದುಕೊಳ್ಳೋಣ ಕ್ವೊಶ್ಚನ್ ಅವರ್ ಆದ ಮೇಲೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಇದು ಮುಖ್ಯ ಇದೆ. ಕ್ವೊಶ್ಚನ್ ಅವರನ್ನು ಮುಂದಕ್ಕೆ ಹಾಕಿ...

ಶ್ರೀ ಕೆ.ಎಸ್.ಈಶ್ವರಪ್ಪ : ಇವರು ಸುಪ್ರೀಂಕೋರ್ಟಿಗೆ ಹೋಗುತ್ತೇವೆ ಎಂದು ಹೇಳುತ್ತಿದ್ದಾರೆ.

ಅಧ್ಯಕ್ಷರು : ಅವರು ಎಲ್ಲಿಗೆ ಬೇಕಾದರೂ ಹೋಗಲಿ, ಒಂದು ಗಂಟೆ ಹೊತ್ತು ಪ್ರಶ್ನೋತ್ತರ ಮುಗಿಸಿಬಿಡೋಣ. ಇಷ್ಟು ಹೊತ್ತಿಗೆ ಒಂದು ಪ್ರಶ್ನೇನೆ ಆಗಿಬಿಡುತ್ತಿತ್ತು.

ಶ್ರೀ ವಾಟಾಳ್ ನಾಗರಾಜ್ : ಪ್ರಶ್ನೋತ್ತರ ಮುಂದೂಡಿರುವ ನಿದರ್ಶನ ಇದೆ, ಇದು ಬಹಳ ಗಂಭೀರವಾದ ಪ್ರಶ್ನೆ. ದಯಮಾಡಿ ತಾವು ಮುಂದೂಡಿ. ಚರ್ಚೆಗೆ ಅವಕಾಶ ಕೊಡುವುದು ಒಳ್ಳೆಯದು.

ಅಧ್ಯಕ್ಷರು : ನಿಮ್ಮ ಎಲ್ಲರ ಸ್ನೇಹದ ಫಲವಾಗಿ ಸಾಕಷ್ಟು ಅನುಭವ ನನಗೆ ಬಂದಿದೆ. ಪ್ರಶ್ನೋತ್ತರ ಮುಂದೂಡಬೇಕಾದ ಸಂದರ್ಭ ಬಂದರೆ ನೀವು ಹೇಳುವುದಕ್ಕೆ ಅವಕಾಶ ಕೊಡದ ಮೊದಲೇ ನಾನು ಮಾಡುತ್ತೇನೆ. ಈಗ ಪ್ರಶ್ನೋತ್ತರ;

ಶ್ರೀ ಕೆ.ಎಸ್.ಈಶ್ವರಪ್ಪ : ಇವರಿಗೆ ಹೈಕೋರ್ಟ್ ಲೆಕ್ಕಕ್ಕೆ ಇಲ್ಲ, ಸುಪ್ರೀಂಕೋರ್ಟ್ ಛೀಮಾರಿ ಹಾಕಿದರೂ ಅವರಿಗೇನೂ ಅನ್ನಿಸುವುದಿಲ್ಲ.

ಶ್ರೀ ಎಂ.ಸಿ.ನಾಣಯ್ಯ : ಈ ದೇಶದಲ್ಲಿ ಸುಪ್ರೀಂಕೋರ್ಟಿನಿಂದ ಛೀಮಾರಿ ಹಾಕಿಸಿಕೊಂಡಿರುವವರು ನೀವು ಮಾತ್ರ. ನಾವಲ್ಲ. ಅದನ್ನು ಮುಂದೆ ಹೇಳುತ್ತೇನೆ.

ಶ್ರೀ ಕೆ.ಎಸ್.ಈಶ್ವರಪ್ಪ : ಆರಣ್ಯ ಲೂಟಿ ನಡೆಸಿದಾಗ ಸರ್ಕಾರ ಸುಮ್ಮನೆ ಕೂತಿದೆ ಎಂದು ಛೀಮಾರಿ ಹಾಕಿಸಿಕೊಂಡ ಸರ್ಕಾರ ನೀವೋ ನಾವೋ ? ಅಂತಹ ಹತ್ತಾರು ಉದಾಹರಣೆಗಳಿವೆ.

ಅಧ್ಯಕ್ಷರು : ನಾನು ತಮ್ಮಲ್ಲಿ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ : ಐದು ನಿಮಿಷದ ಕೆಳಗೆ ನನ್ನ ಕೊಠಡಿಯಲ್ಲೂ ಬೇಸರ ವ್ಯಕ್ತಪಡಿಸಿದೆ. ಕಲಾಪ ನಡೆಸಲು ನಮಗೆ ಸಿಗುವ ಸಮಯಾನೇ ಬಹಳ ಕಡಿಮೆಯಾಗಿದೆ. ಪ್ರಶ್ನೋತ್ತರ ಎಲ್ಲಾ ಸದಸ್ಯರ ಹಕ್ಕು ಪಾಪ. ಒಂದು ಗಂಟೆ, ತಕ್ಷಣ ಮುಗಿಸಿ ಅದಕ್ಕೆ ಅವಕಾಶ ಮಾಡಿಕೊಡುತ್ತೇನೆ. ಬೇರೆ ಇನ್ನೇನೂ ಉದ್ದೇಶವಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಇನ್ನೊಂದು ವಿಷಯಾನೂ ಇದೆ.

ಅಧ್ಯಕ್ಷರು : ಅದನ್ನೂ ಈವತ್ತೇ ತೆಗೆದುಕೊಳ್ಳುತ್ತೇನೆ, ಅದು ನನ್ನ ಜವಾಬ್ದಾರಿ.

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೇ, ಈ ಸದನ ನಡೆಯುವಾಗ ವಿದ್ಯುತ್ ದರ ಜಾಸ್ತಿ ಮಾಡುತ್ತೇನೆ ಎಂದು ಮುಖ್ಯಮಂತ್ರಿಗಳು ಹೇಳಿದ್ದಾರೆ.

ಅಧ್ಯಕ್ಷರು : ಪ್ರಶ್ನೋತ್ತರ ಮುಗಿಯಲಿ ಈಗೇನಾಗಿಬಿಟ್ಟಿದೆ ಗೊತ್ತೇ, ಮೇಲ್ಮನೆಯಲ್ಲಿ ಸಭಾಪತಿಗಳು ಬಹಳ ಸ್ವಿಕ್ಕಾಗಿರುತ್ತಾರಂತೆ, ಒಂದು ಗಂಟೆಯಲ್ಲೇ ಪ್ರಶ್ನೋತ್ತರ ಮುಗಿಸುತ್ತಾರಂತೆ. ಇಲ್ಲಿ ಸ್ಪೀಕರ್ ಬಹಳ ಸಲಿಗೆ ಕೊಟ್ಟುಬಿಟ್ಟಿದ್ದಾರೆ ನಮಗೆ ಕಷ್ಟವಾಗುತ್ತದೆ ಎಂದು ಮಂತ್ರಿಗಳೆಲ್ಲಾ ಬೇಸರ ಮಾಡಿಕೊಂಡಿದ್ದಾರೆ. ನಾನು ನಿಮ್ಮ ಹತ್ತಿರ ಸಲಿಗೆಯಿಂದ ಆಪಾದನೆಗೆ ಗುರಿಯಾದೆ ನೋಡಿ. ಮುಖ್ಯಮಂತ್ರಿಗಳಿಗೆ ದೂರು ಹೋಗಿದೆ ಕೇಳಿ. ಈಗ 11-25 ನಿಮಿಷ, ಪ್ರಶ್ನೋತ್ತರ ಪ್ರಾರಂಭವಾಗುತ್ತಿದೆ. ಮೊದಲನೇ ಪ್ರಶ್ನೆ ಕೌಜಲಗಿ ಮಹಾಂತೇಶ ಶಿವಾನಂದ-ಅವರು ಅಬ್ಸೆಂಟ್; ಮದುವೆಯಾಗಿದೆ ಅವರ ಪರವಾಗಿ ಯಾರಿಗೂ ಬರೆದುಕೊಟ್ಟಿಲ್ಲ ಪೆಂಡಿಂಗ್ ಇಡುತ್ತೇನೆ.

2. ಪ್ರಶ್ನೋತ್ತರ

(ಅ) ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಹಾವೇರಿ ಜಿಲ್ಲೆಯ ನಬಾರ್ಡ್ ಕಾಮಗಾರಿಗಳು

119 (1014) ಕುನ್ನೂರ ಮಂಜುನಾಥ ಚನ್ನಪ್ಪ (ಶಿಗ್ಗಾಂವ್) : ಮಾನ್ಯ ಲೋಕೋಪಯೋಗಿ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹಾವೇರಿ ಜಿಲ್ಲೆಯ ನಬಾರ್ಡ್ ದಲ್ಲಿತೆಗೆದುಕೊಂಡ ಕಾಮಗಾರಿಗಳು ಯಾವುವು ? ಅವುಗಳು ಯಾವ ಹಂತದಲ್ಲಿದೆ ;

ಆ) ಹಾವೇರಿ ಜಿಲ್ಲಾ ಶಿಗ್ಗಾಂವ್ ತಾಲ್ಲೂಕು ಬಂಕಾಪುರ ಕ್ರಾಸ್ ದಿಂದ ಜಿಲ್ಲೆವರೆಗೆ ಎಷ್ಟು ಕಿ.ಮೀ. ಕೆಲಸ ಪ್ರಾರಂಭಿಸಲಾಗಿದೆ ;